**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ</u>**

ಸಿ.ಸಿ.ನಂಃ 9755/2021 ಸಿ.ಡಬ್ಲ್ಯೂ –04 ಪಿ.ಡಬ್ಲ್ಯೂ -04

| | | |
|---|---|---|
| ಹೆಸರು | ಃ | ಬಾಬುರಾವ |
| ತಂದೆ | ಃ | ಭೀಮರಾವ್ |
| ವಯಸ್ಸು | ಃ | ೫೮ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಆಳಂದ |

ದಿನಾಂಕಃ 19.07.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ</u>**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-5 ರವರ ಪರಿಚಯ ಇರುವುದಿಲ್ಲ. ಪೋಲಿಸರು ನನಗೆ ಕರೆದು ಪಂಚನಾಮೆಯನ್ನು ಮಾಡಿ ಪೋಟೋ ತೆಗೆದುಕೊಂಡಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸದರಿ ಜಪ್ತಿ ಪಂಚಚನಾಮೆಯನ್ನು ನಿಪಿ. ೩ ಎಂದು, ಸಾಕ್ಷಿಯ ಸಹಿಯನ್ನು ನಿಪಿ. ೩ ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ದಿನಾಂಕ 29-09-2021 ರಂದು 1 ನೇ ಆರೋಪಿಯು ಕಂಮಸೂರ ನಾಯಕ ತಾಂಡಾದಲ್ಲಿ ನನ್ನನ್ನು ಮತ್ತು ಚಾಸಾ 5 ರವರ ಸಮಕ್ಷಮ 20 ಗ್ರಾಂ ಬಂಗಾರದ ಒಂದು ಪಾಟಲಿ, 10 ಗ್ರಾಂ ಬಂಗಾರದ ಒಂದು ಲಾಕೇಟ್, 04 ಗ್ರಾಂ ಬಂಗಾರದ ಒಂದು ಉಂಗುರ, 2 ಬಂಗಾರದ ಸುತ್ತುಂಗುರಗಳು, 10 ಗ್ರಾಂ ಬಂಗಾರದ ಒಂದು ಜೊತೆ ಮಂಗಳ ಸೂತ್ರದ ಗುಂಡುಗಳು, 5 ಗ್ರಾಂ ಬಂಗಾರದ ಒಂದು ಕಿವಿ ಓಲೆ, 10 ಗ್ರಾಂ ಬೆಳ್ಳಿಯ ಒಂದು ಜೊತೆ ಕಾಲುಂಗರ, 3 ಗ್ರಾಂ ಬೆಳ್ಳಿಯ ಒಂದು ಜೊತೆ ಕಾಲು ಚೈನು, 5 ಗ್ರಾಂ ಬಂಗಾರದ ಒಂದು ಹೂ, 05 ಗ್ರಾಂ ಬಂಗಾರದ ಸುತ್ತುಂಗುರ, 20 ಗ್ರಾಂ ಬೆಳ್ಳಿಯ ಒಂದು ಜೊತೆ ಕಾಲು ಚೈನುಗಳನ್ನು 50 ಗ್ರಾಂ ಬೆಳ್ಳಿಯ ಉಡಿದಾರ, 40 ಗ್ರಾಂ ಬೆಳ್ಳಿಯ ಒಂದು ಹಾಲಗಡಗಾ, 02 ಬೆಳ್ಳಿಯ 35 ಗ್ರಾಂ ಲಾಕೆಟಗಳು ಮತ್ತು ನಗದು ರೂ. 25,000/- ಒಂದು ಕಬ್ಬಿದ ರಾಡು, ಒಂದು ಬ್ಲೇಡ್, ಒಂದು ಸುಕ್ರಡ್ರೈವರ್ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಪಂಚನಾವೆಯ ಮಾಡಿ ಮೇಲೆ ತಿಳಿಸಿದ ವಸ್ತುಗಳನ್ನು ಜಪ್ತಿ ಮಾಡಿದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿತರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಆಳಂದ